management. Certainly at that point of time, all these factors will be borne in mind.

ಶ್ರೀ ಕಾಗೋಡು ತಿಮ್ಮಪ್ಪ.—ಶಿವಮೊಗ್ಗದಲ್ಲಿರತಕ್ಕ ಕಾರ್ಖಾನೆ ಬಹಳ ವರ್ಷಗಳಿಂದ ಒಂದೇ ಸ್ಥಿತಿಯಲ್ಲಿದೆ. ಆದ್ದರಿಂದ ಅದನ್ನು ಸ್ವಲ್ಪ ಅಭಿವೃದ್ಧಿಪಡಿಸಿ ಹೆಚ್ಚು ಜನಗಳಿಗೆ ಉದ್ಯೋಗ ಕೊಡುವುದಕ್ಕೆ ಆಲೋಚನೆ ಮಾಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ಹೆಚ್ಚು ಜನಗಳಿಗೆ ಉದ್ಯೋಗ ಕಲ್ಪನಬೇಕು ಎಂಬುದು ನಮ್ಮ ಉದ್ದೇಶ.

ಶ್ರೀ ಸಿ. ಬೈರೇಗೌಡ.—ಅವರಿಗೆ ಮಿನಿಮಮ್ ವೇಜಸ್ ಆಕ್ಟ್ ಪ್ರಕಾರ ಸಂಬಳವನ್ನು ಕೊಡುತ್ತಿದ್ದೀರಾ ಹೇಗೆ ? ಈಗ ಅಲ್ಲಿ ಸೂಪರ್‌ವೈಜರುಗಳಿಗೆ ಮತ್ತು ಕ್ಲಾರ್ಕ್‌ಗಳಿಗೆ ಹೆಚ್ಚು ಸಂಬಳ ಮತ್ತು ಕಾರ್ಮಿಕರಿಗೆ ಕಡಿಮೆ ಸಂಬಳ ಯಾವ ಆಧಾರದ ಮೇಲೆ ಕೊಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ಅವರು ಕೆಲಸಕ್ಕೆ ಅರ್ಜಿಯನ್ನು ಹಾಕಿ, ಅವರನ್ನು ಕೆಲಸಕ್ಕೆ ನೇಮಿಸಿಕೊಳ್ಳುವಾಗ ಯಾವ ಆಧಾರದ ಮೇಲೆ ಕ್ಲಾರ್ಕ್‌ಗೆ ಇಷ್ಟು ಸಂಬಳ, ಸೂಪರ್‌ವೈಜರಿಗೆ ಇಷ್ಟು ಸಂಬಳ, ಕಾರ್ಮಿಕರಿಗೆ ಇಷ್ಟು ಸಂಬಳ ಎಂದು ನಿಗದಿ ಮಾಡಿ ರೆಕ್ರೂಟ್ ಮಾಡಿಕೊಂಡಿರುತ್ತಾರೆಯೋ ಅದನ್ನೇ ಮುಂದುವರಿಸಿಕೊಂಡು ಬರುತ್ತಾರೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಸ್ವಾಮಿ, ಮೈಸೂರು ಗಂಧದ ಎಣ್ಣೆಯ ಕಾರ್ಖಾನೆಯಲ್ಲಿ 177 ಜನ ಕಾರ್ಮಿಕರು, ಗುಮಾಸ್ತರು ಮತ್ತು ಅಧಿಕಾರಿಗಳು 53 ಜನ, ಶಿವಮೊಗ್ಗ ಗಂಧದ ಎಣ್ಣೆಯ ಕಾರ್ಖಾನೆಯಲ್ಲಿ 103 ಜನ ಕಾರ್ಮಿಕರು, 33 ಜನ ಗುಮಾಸ್ತರು ಮತ್ತು ಅಧಿಕಾರಿಗಳು ಇದ್ದಾರೆ. ಇದರಲ್ಲಿ ಹರಿಜನ ಗಿರಿಜನರು ಎಷ್ಟು ಜನ ಇದ್ದಾರೆ. ಒಂದು ವೇಳೆ ಅದರಲ್ಲಿ ಹರಿಜನ ಗಿರಿಜನರು ಇಲ್ಲದಿದ್ದರೆ ಇನ್ನು ಮುಂದಕ್ಕಾದರೂ ಕೂಡ ಈ ಫ್ಯಾಕ್ಟರಿಗಳಲ್ಲಿ ಹರಿಜನ ಗಿರಿಜನರಿಗೆ ಕೆಲಸಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ಇದುವರೆಗೆ ಅವರಿಗೆ ಕೊಟ್ಟಿದ್ದಾರೋ ಇಲ್ಲವೋ ಗೊತ್ತಿಲ್ಲ, ಇನ್ನು ಮುಂದೆ ಮಾಡ್ಡತಕ್ಕ ರೆಕ್ರೂಟ್‌ಮೆಂಟಿನಲ್ಲಿ ಹರಿಜನ ಗಿರಿಜನರಿಗೆ ಸಾಕಷ್ಟು ಪ್ರಾತಿನಿಧ್ಯ ಕೊಡಬೇಕು ಎನ್ನುವ ತತ್ವವನ್ನು ನಾನು ಒಪ್ಪತಕ್ಕವನು.

Rural Housing Scheme

370. **Sri B. SATHYANARAYANA SINGH** (Hospet).—

Will the Minister for Municipal Administration be pleased to state :—

(*a*) whether there is a proposal before Government to allot Rs. 50 lakhs in the current year's budget for Rural Housing Scheme ;

(*b*) whether there is any proposal before the Government to grant housing loans to the weaker sections of the society of Bellary District through Rural Housing Cell ?

Sri B. BASAVALINGAPPA (Minister for Municipal Administration).—

(*a*) A provision of Rs. 40 lakhs has been made in the State Plan Budget towards Rural Housing Scheme to be alloted to the Mysore Housing Board out of the loan to be received from the Life Insurance Corporation of India.

(SRI B. BASAVALINGAPPA)

(*b*) As a matter of policy the loans under Rural Housing Scheme are sanctioned to the weaker sections of the society in Rural Areas and as recommended by the respective Deputy Commissioners of Districts. In Bellery District also, loans will be sanctioned to such of the villagers as recommended by the Deputy Coommissioner and the Executive Engineer, Mysore Housing Board Division, Bellary, subject to availability of grants under Rural Housing Scheme.

ಶ್ರೀ ಬಿ. ಸತ್ಯನಾರಾಯಣಸಿಂಗ್.—ಯಾವ ಯಾವ ಜಿಲ್ಲೆಗಳಲ್ಲಿ ರೂರಲ್ ಹೌಸಿಂಗ್ ಸ್ಕೀಂ ಪ್ರಕಾರ ಮಾಡಿರುವ ಸೊಸೈಟಿಗಳು ನಮರ್ಪಕವಾಗಿ ಕೆಲಸ ಮಾಡುತ್ತಿವೆಯೋ ಅವರಿಗೆ ಹೆಚ್ಚು ಸಾಲಗಳನ್ನು ಕೊಡಲು ಪ್ರಾಶಸ್ತ್ಯ ಕೊಡುತ್ತಿರಾ ?

†ಶ್ರೀ ಬಿ. ಬಸವಲಿಂಗಪ್ಪ.—ಇದನ್ನು ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಜಿ. ಪುಟ್ಟಸ್ವಾಮಿ.—ಹರಿಜನ ಗಿರಿಜನರಿಗಾಗಿ ಮನೆಕಟ್ಟಿಕೊಳ್ಳುವುದಕ್ಕಾಗಿ ಜೀವವಿಮಾ ಸಂಸ್ಥೆಯವರು ಹಣ ಕೊಡಲು ಮುಂದೆ ಬಂದಿದ್ದಾರೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ಈ ಪ್ರಶ್ನೆ ಬೇರೆಯಾಗುತ್ತದೆ. ಇದಕ್ಕೆ ಸಂಬಂಧ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ರೂರಲ್ ಹೌಸಿಂಗ್ ಸ್ಕೀಂಗೆ ಸಂಬಂಧಪಟ್ಟ ಹಾಗೆ ಎಲ್. ಐ. ಸಿ. ಯಲ್ಲಿ ಒಂದು ಕಾಂಪ್ರಹೆನ್ಸೀವ್ ಸ್ಕೀಂ ಇದೆ, ಇದರಂತೆ ಕೇರಳದಲ್ಲಿ ನುಮಾರು ಐದು ಲಕ್ಷ ಮನೆಗಳನ್ನು ಮೂರು ವರ್ಷಗಳಲ್ಲಿ ಕಟ್ಟಲು ಕೇಂದ್ರದವರು ಸಹಾಯ ಮಾಡುತ್ತಾರೆಂದು ತಿಳಿದು ಬಂದಿದೆ. ಇದರ ಬಗ್ಗೆ ಈ ಸರಕಾರ ಕೂಡ ಆಲೋಚನೆ ಮಾಡುತ್ತಿದ್ದಾರೆಯೇ ಹೇಗೆ ?

ಶ್ರೀ ಬಿ. ಬಸವಲಿಂಗೆಪ್ಪ.—ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆ ಬಹಳ ಮಹತ್ವವುಳ್ಳದ್ದು. ರೂರಲ್ ಹೌಸಿಂಗ್ ಸ್ಕೀಂ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎನ್ನುವುದು ಸರಕಾರದ ಅಭಿಪ್ರಾಯ ಮತ್ತು ಸಾಕಷ್ಟು ಮನೆಗಳನ್ನು ಇದುವರೆಗೆ ಕಟ್ಟಲೂ ಆಗಿಲ್ಲ ಎನ್ನುವುದೂ ಸರ್ಕಾರದ ಅಭಿಪ್ರಾಯ ನಾನು ಮೊದಲೇ ಹೇಳಿದ ಹಾಗೆ ರೂರಲ್ ಹೌಸಿಂಗ್ ಸ್ಕೀಂ ಮೂಲಕ ಹೆಚ್ಚು ಹೆಚ್ಚು ಮನೆಗಳನ್ನು ಕಟ್ಟಿಸುವ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಎರಡನೇದು ಸರಕಾರದವರೇ ಸಾಕಷ್ಟು ಹಣವನ್ನು ಒದಗಿಸಿ ಬಡವರಿಗೆ ಮನೆಗಳನ್ನು ಕಟ್ಟಿಸಿಕೊಡಬೇಕು ಎನ್ನುವ ಯೋಜನೆಯೂ ಇದೆ. ಇವೆಲ್ಲವೂ ಸರಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಉತ್ತರದಲ್ಲಿ ಮುಂಗಡ ಪತ್ರದಲ್ಲಿ ರೂರಲ್ ಹೌಸಿಂಗು ಸ್ಕೀಂಗಾಗಿ 40 ಲಕ್ಷ ಹಣ ಒದಗಿಸಲಾಗಿದೆ ಎಂದು ಇದೆ. ಇದರಲ್ಲಿ ಶೇಕಡಾ ಇಪ್ಪತ್ತರಷ್ಟು ಹಣವನ್ನು ಪರಿಶಿಷ್ಟ ವರ್ಗದವರಿಗಾಗಿ ಇಡಲು ಸರಕಾರ ಅವಕಾಶ ಮಾಡಿಕೊಡುತ್ತದೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ಈ ಸಲಹೆಯನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಹೆಚ್. ಬಿ. ಚನ್ನಪ್ಪ.—ಹೌಸಿಂಗು ಬೋರ್ಡಿನಲ್ಲಿ ಸಾಲದ ಹಣವನ್ನು ಮುಂಜೂರು ಮಾಡುವುದರಲ್ಲಿ ವಿಳಂಬವಾಗುತ್ತಿದೆ, ಇದನ್ನು ತಪ್ಪಿಸಲು ತಕ್ಕ ಕ್ರಮ ತೆಗೆದುಕೊಂಡು ಸಾಲಗಳನ್ನು ಬೇಗನೇ ಮುಂಜೂರು ಮಾಡಲು ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ನಾನೂ ಕೂಡ ಹಿಂದೆ ಈ ಬೋರ್ಡು ಮೂಲಕ ನಗದು ಹಣವನ್ನು ಕೊಡುವಾಗ ಇದನ್ನು ಹೇಗೆ ಕೊಡುತ್ತಾರೆ ಎನ್ನುವುದನ್ನು ಪರಿಶೀಲನೆ ಮಾಡಿ ನೋಡಿದಾಗ ಇದು ಕೆಲವೂ ಹಿತಾಸಕ್ತಿಗಳಿಗಾಗಿ ಹೋಗುತ್ತಿರುವುದು ತಿಳಿಯಿತು. ಇದನ್ನು ಗಮನಕ್ಕೆ ತೆಗೆದುಕೊಂಡು ನಗದು ಹಣ ಕೊಡುವುದನ್ನು ಸರಕಾರ ಈಚೆಗೆ ನಿಲ್ಲಿಸಿದೆ ಎರಡನೇ ಕಂತಿನ ಸಾಲಕೊಡಬೇಕಾದರೆ ಮೊದಲನೇ ಹಂತದಲ್ಲಿ ಕೊಟ್ಟಿದ್ದಸಾಲವನ್ನು ತೀರಿಸಬೇಕಾಗಿಲ್ಲವಾದ್ದರಿಂದ ಆದಷ್ಟು ಬೇಗ ಸಾಲಪಾವತಿ ಮಾಡಲು ಅವಕಾಶವಿದೆ ಇವರಿಗೆರ್ಾ ಕೊಡಲಾಗುತ್ತಿದೆ.

ಶ್ರೀ ಶರಣಪ್ಪ.—ಡೆಪ್ಯೂಟೀ ಕಮಿಷನರವರು ಶಿಫಾರಸು ಮಾಡಿದರೇನೇ ಇಂತಹ ಹರಿಜನ ರಿರುವ ಸ್ಥಳಗಳಿಗೆ ಹಣವನ್ನು ಒದಗಿಸುತ್ತಾರೆ ಮತ್ತು ಅಲ್ಲಿ ಮನೆಗಳನ್ನು ಕಟ್ಟಿಸುತ್ತಾರೆ ಎಂದು

ಇದೆ. ಆದರೆ ಕೆಲವು ಗ್ರಾಮಗಳವರು ಒಂದು ವೇಳೆ ಅವರಾಗಿಯೇ ಹರಿಜನರಿಗಾಗಿ ಮನೆಗಳನ್ನು ಕಟ್ಟಿಸಿಕೊಡುತ್ತೇವೆಂದು ಅಭಿಪ್ರಾಯ ವ್ಯಕ್ತಮಾಡಿದರೆ ಅವರಿಗೂ ಸಹಾಯ ಮಾಡಿ ಅನುಕೂಲ ಮಾಡುತ್ತದೆಯೇ ಹೇಗೆ ?

ಶ್ರೀ ಬಿ. ಬಸವಲಿಂಗಪ್ಪ.—ಇದೂ ಒಂದು ಮಾರ್ಗ. ಇದು ಡೆಪ್ಯುಟೀ ಕಮಿಷನರವರು ಅವರೇ ತೆಗೆದುಕೊಳ್ಳತಕ್ಕ ಕಾರ್ಯಕ್ರಮ. ಮಾನ್ಯ ಸದಸ್ಯರು ಸಲಹೆ ಮಾಡಿದಂತೆ ಆಯಾ ಗ್ರಾಮಗಳವರೇ ಮುಂದೆ ಬಂದು ಮನೆ ಕಟ್ಟುತ್ತೇವೆ ಎಂದು ಹೇಳಿ ಸರಕಾರದ ಮಂಜೂರಾತಿ ಕೇಳಿದರೆ ಅದನ್ನು ಮಂಜೂರು ಮಾಡುವುದಕ್ಕೆ ಹಿಂದೆಗೆಯುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಗ್ರಾಮಾಂತರಗಳಲ್ಲಿ ಕಟ್ಟುವ ಮನೆಗಳಲ್ಲಿ ಶೇಕಡಾ ಐವತ್ತರಷ್ಟನ್ನು ಹರಿಜನ ಹಾಗೂ ಗಿರಿಜನರಿಗೇ ಇರಬೇಕೆಂದು ಇಡಲು ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ನಮ್ಮ ಸರಕಾರದ ನೀತಿಯೇನು ಎನ್ನುವುದನ್ನು ಸ್ಪಷ್ಟವಾಗಿ ಬಹು ದಿವಸಗಳ ಹಿಂದೆಯೇ ಹೇಳಿದ್ದೇವೆ ಮತ್ತು ಇದರಂತೆ ಹರಿಜನರಿಗೆ ಸಹಾಯ ಮಾಡತಕ್ಕದ್ದು ನಮ್ಮ ಆದ್ಯ ಕರ್ತವ್ಯ. ಹರಿಜನ ಹಾಗೂ ಗಿರಿಜನರಿಗೆ ಪ್ರಾಶಸ್ತ್ಯ ಕೊಡಬೇಕೆಂದು ಹರಿಜನರು ಹಾಗೂ ಬಡವರು ಹಿಂದುಳಿದವರ್ಗಗಳವರು ಇವರೆಲ್ಲರಿಗೂ ಹೆಚ್ಚಿನ ಗಮನ ಕೊಡಬೇಕೆಂದು ಇವರಿಗೆರ್ಲಾ ಕೊಟ್ಟು ಮನೆ ಕಟ್ಟಿಸಿಕೊಡಬೇಕೆಂದು ಒಂದು ಕಾರ್ಯಕ್ರಮ ಹಾಕಿಕೊಳ್ಳಬೇಕೆಂದೂ ಇದೆ.

ಶ್ರೀ ಗಟ್ಟಿ ಚಂದ್ರಶೇಖರ್.—ಹರಿಜನರಿಗೆ ಸಾಲ ಕೊಟ್ಟು ಮನೆ ಕಟ್ಟಿಸುವ ಬಗ್ಗೆ ಹಣ ಕೊಟ್ಟರೆ ದುರುಪಯೋಗವಾಗುತ್ತದೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ನಾನು ಸರಕಾರವನ್ನು ಕೇಳಿದುದು ಸರ್ಕಾರದವರೇ ಒಂದೊಂದು ಕಡೆ ಹತ್ತು ಮನೆಗಳನ್ನು ಕಟ್ಟಿಸಿ ಹರಿಜನರಿಗೆ ಹಾಗೂ ಹಿಂದುಳಿದ ಬಡವರಿಗೆ ಹಂಚಲು ವ್ಯವಸ್ಥೆ ಏಕೆ ಮಾಡಬಾರದು ?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ನಾನು ಇಂತಹ ಒಂದು ಸೊಸೈಟಿಯ ಡೈರೆಕ್ಟರಾಗಿಯೂ ಕೆಲಸ ಮಾಡಿದ್ದೇನೆ; ಇದರ ಅನುಭವದ ಪ್ರಕಾರ ಮನೆಗಳನ್ನು ಕಟ್ಟಲು ಸಾಲ ಕೊಟ್ಟರೆ ಮನೆಗಳನ್ನು ಕಟ್ಟದೆ ಹಣವೇ ವಾಪಸು ಬರುವ ಸ್ಥಿತಿಯಲ್ಲಿರುತ್ತಿರಲಿಲ್ಲ. ಇದಕ್ಕಾಗಿ ಬಡವರಿಗಾಗಿ ಸರಕಾರವೇ ನೇರವಾಗಿ ಮನೆಗಳನ್ನು ಕಟ್ಟಿಸಿ ಕೊಡಬೇಕೆಂದು ಸರಕಾರದ ಉದ್ದೇಶ ಇದೆ. ಇದರ ಬಗ್ಗೆ ಯೋಚನೆ ಮಾಡಲಾಗುತ್ತಿದೆ. ಇದರ ಬಗ್ಗೆ ಸರಕಾರ ಅತಿ ಶೀಘ್ರವಾಗಿ ನಿರ್ಧಾರ ತೆಗೆದುಕೊಳ್ಳುತ್ತದೆ ಎಂದು ಮಾತ್ರ ಇಲ್ಲಿ ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಹರಿಜನರಿಗಾಗಿ ಮನೆಗೆ ಕೊಟ್ಟ ಸಾಲವನ್ನು ಅವರು ಮರು ಪಾವತಿ ಮಾಡುವ ಸ್ಥಿತಿಯಲ್ಲಿರುವುದಿಲ್ಲ. ಇಂತಹ ಬಡ ಹರಿಜನರ ಬಗ್ಗೆ ಸಾಲಗಳನ್ನು ಕೊಟ್ಟಿದ್ದರೆ ಅದನ್ನು ಮಾಫೀ ಮಾಡುವುದಕ್ಕೆ ಪರಿಶೀಲನೆ ಮಾಡುತ್ತಾರೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ಇಂತಹ ಕೇಸುಗಳು ಬಂದಾಗ ಅದರ ಬಗ್ಗೆ ಸೂಕ್ತ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರಗಳು ಮುಗಿದವು.

QUESTIONS FOR ANSWERS ON THE DAY

(but not taken up)

Hemavathi Project

340. Sri H. D. DEVEGOWDA (Holenarasipur).—

Will the Minister of State for Major Irrigation be pleased to state:—

(*a*) when the Hemavathy Project was sanctioned and when it will be completed;